**<u>ಸಾಕ್ಷಿಯನ್ನು ದಿನಾಂಕಃ 07-07-2022 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ 3 ನೇ ಪ್ರತಿವಾದಿಯರ ಪರ ವಕೀಲರಾದ ಶ್ರೀ.ಎಸ್.ಜಿ.ಕೆ ರವರಿಂದಃ</u>**

ನಾನು 7 ನೇ ತರಗತಿವರೆಗೆ ಓದಿರುತ್ತೇನೆ. ನಾನು ತಾವರಗುಂದಿಯಲ್ಲಿ ವಾಸವಿರುತ್ತೇನೆ. ಚಂದ್ರಶೇಖರ್ ರವರಿಗೆ ನನ್ನ ತಂದೆ ಮತ್ತು ಭಾಗ್ಯಮ್ಮ, ಮಂಜಮ್ಮ ಮತ್ತು ನೇತ್ರಮ್ಮ ಎನ್ನುವ ಮೂರು ಜನ ಹೆಣ್ಣುಮಕ್ಕಳು ಇರುತ್ತಾರೆ. ನನ್ನ ತಂದೆ ವೀರಬಸಯ್ಯನು ಕುಟುಂಬದಲ್ಲಿ ಹಿರಿಯ ಎಂದರೆ ಸರಿ. ನಮ್ಮ ಅಜ್ಜಿ ಗಿರಿಜಮ್ಮ ಪೋತಿಯಾಗುವಾಗ ಸುಮಾರು 60-70 ವರ್ಷ ನಡೆಯುತ್ತಿದ್ದವು. 2 ನೇ

ವಾದಿ ನನ್ನ ತಾಯಿ ಇರುತ್ತಾಳೆ. ನನ್ನ ತಂದೆಯಾದ 1 ನೇ ಪ್ರತಿವಾದಿ ಮತ್ತು ತಾಯಿಯಾದ 2 ನೇ ವಾದಿ 1985 ರಲ್ಲಿ ಮದುವೆಯಾಗಿರುತ್ತಾರೆ. ಸದರಿಯವರ ಮದುವೆ ಹರಿಹರದ ಹರಿಹರಲಿಂಗೇಶ್ವರ ದೇವಸ್ಥಾನದಲ್ಲಿ ಮದುವೆಯಾಗಿ, ಹರಪನಹಳ್ಳಿಯಲ್ಲಿ ರಿಜಿಸ್ಟರ್ ಆಗಿರುತ್ತದೆ. ನನ್ನ ತಂದೆ ತಾಯಿ ಮದುವೆಯಾಗಿ 4 ವರ್ಷಗಳ ಕಾಲ ಜೊತೆಯಲ್ಲಿ ಇದ್ದರು. ನಂತರ ಮನೆ ಬಿಟ್ಟುಹೋಗಿ ಸಂಗೂರು ಶುಗರ್ ಫ್ಯಾಕ್ಟರಿಯಲ್ಲಿ 4 ವರ್ಷಗಳ ಕಾಲ ಕೆಲಸ ಮಾಡಿರುತ್ತಾರೆ. ನನು 1988 ರಲ್ಲಿ ಜನಿಸಿರುತ್ತೇನೆ. ನಾನು ಹುಟ್ಟಿದ ನಂತರ ನನ್ನ ತಂದೆ ಮನೆಯನ್ನು ಬಿಟ್ಟು ಹೋಗಿರುತ್ತಾರೆ. ನನ್ನ ತಂದೆ-ತಾಯಿಯ ಮದುವೆಯಲ್ಲಿ ನನ್ನ ತಂದೆಯ ತಂದೆ-ತಾಯಿ ಮತ್ತು ನನ್ನ ತಾಯಿಯ ತಂದೆ-ತಾಯಿ ಹಾಜರಿರಲಿಲ್ಲ ಎಂದರೆ ಸರಿಯಲ್ಲ. ಆ ಮದುವೆಯ ಸಮಯದಲ್ಲಿ ಸದರಿಯವರು ಹಾಜರಿದ್ದರು ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯೇ 3 ಜನ ಅಕ್ಕ-ತಂಗಿಯರ ಮದುವೆ ಮಾಡಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿ ಅವರ ತಂದೆ-ತಾಯಿ ಮತ್ತು ಸಹೋದಿಯರೊಂದಿಗೆ ತಾವರಗುಂದಿಯಲ್ಲಿ ವಾಸವಾಗಿದ್ದರು ಎಂದರೆ ಸರಿ. ಮದುವೆಯಾದ ನಂತರ ಪ್ರತಿವಾದಿ ನಂ.2(ಎ) ರಿಂದ (ಸಿ) ವೆರೆಗಿನ ಪ್ರತಿವಾದಿಗಳು ಅವರ ಮದುವೆಯಾದಗಿನಿಂದ ಅವರ ಗಂಡನಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ನಮ್ಮ ಅಜ್ಜಿ ಗಿರಿಜಮ್ಮ ಮೃತ ಹೊಂದುವವರೆಗೂ 1 ನೇ ಪ್ರತಿವಾದಿಯೊಂದಿಗೆ ವಾಸವಿದ್ದಳು ಎಂದರೆ ಸರಿ. ಗಿರಿಜಮ್ಮ ಮೃತ ಹೊಂದುವುದಕ್ಕೆ ಮುಂಚೆ ಅವರಿಗೆ ಪಾರ್ಶ್ವ ಆಗಿತ್ತು ಮತ್ತು ಬ್ರಿನ್ ಶಾಕ್ ಆಗಿತ್ತು ಎಂದರೆ ಸ್ವಲ್ಪ ಆಗಿತ್ತು ಎಂದು ನುಡಿಯುತ್ತಾರೆ. ಸದರಿಯವಳ ಎಲ್ಲಾ ಆಸ್ಪತ್ರೆಯ ಖರ್ಚು-ವೆಚ್ಚಗಳನ್ನು 1 ನೇ ಪ್ರತಿವಾದಿಯೇ ಮಾಡುತ್ತಿದ್ದನು ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ತಾಯಿಯ ನಡುವೆ ಪಂಚಾಯಿತಿ ನಡೆದಿತ್ತು ಎಂದರೆ ಸರಿ. 1993 ರಲ್ಲಿ ಸದರಿ ಪಂಚಾಯಿತಿ ಆಗಿರುತ್ತದೆ. ಸದರಿ ಪಂಚಾಯಿತಿಯಲ್ಲಿ ಏನು-ಏನು ತೀರ್ಮಾನ ಆಗಿತ್ತು ಎಂದರೆ ಹೊಲ-ಮನೆಯನ್ನು ನಾವೆ ಮಾಡಿಕೊಂಡು ಹೋಗಬೇಕು ಅಂತ ಹೇಳಿರುತ್ತಾರೆ. ಸದರಿ ಪಂಚಾಯಿತಿಯಲ್ಲಿ ಯಾರು-ಯಾರು ಭಾಗವಹಿಸಿದ್ದರು ಅಂತ ನನಗೆ ನೆನಪಿರುವುದಿಲ್ಲ. ಸದರಿ ಪಂಚಾಯಿತಿಯಲ್ಲಿ ಯಾವುದೇ ಬರವಣಿಗೆಯಾಗಿರುವುದಿಲ್ಲ. ನನ್ನ ತಂದೆ ನನ್ನ ತಾಯಿಯನ್ನು ಮದುವೆಯಾಗಿ 4 ವರ್ಷಕ್ಕೆ ಬಿಟ್ಟು ಹೋಗಿರುತ್ತಾನೆ. ನನ್ನ ತಂದೆ ಬಿಟ್ಟುಹೋದ ನಂತರ ನನ್ನ ತಾಯಿಯ ಜೀವನಂಶ ಕೋರಿ ಸಿ.ಡಿ.ಪಿ.ಓ ಆಫೀಸ್ ಅಥವಾ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುವುದಿಲ್ಲ.

ದಾವಾ ಆಸ್ತಿಗಳು ನನ್ನ ತಾತನಿಂದ ಬಂದಿರುತ್ತದೆ. ಸದರಿ ದಾವಾ ಆಸ್ತಿಗಳನ್ನು ಹೊರತು ಪಡಿಸಿ ಬೇರೆ ಆಸ್ತಿಗಳು ಇರುವುದಿಲ್ಲ. ದಾವಾ ಆಸ್ತಿಗೆ ಸಂಬಂದಪಟ್ಟಂತೆ ಪ್ರತಿವಾದಿ ನಂ.1 ಮತ್ತು 2 ಸೇರಿ ಪ್ರತಿವಾದಿ ನಂ.3 ಈತನಿಗೆ ಖರಾರು ಪತ್ರ ಮಾಡಿಕೊಂಡ ವಿಷಯ ನನಗೆ ಗೋತ್ತಿರುವುದಿಲ್ಲ ಕರಾರು ಮಾಡುವ ಸಮಯದಲ್ಲಿ ನನ್ನ ತಂದೆ, ತಾಯಿ, ನಾನು ಮತ್ತು ನಮ್ಮ ಅಜ್ಜಿ ಹಾಜರಿದ್ದೆವು ಎಂದರೆ

ಸರಿಯಲ್ಲ. ಆ ಸಮಯದಲ್ಲಿ ರೂ.40,100/-ಗಳನ್ನು ಪ್ರತಿವಾದಿ ನಂ.1 ಮತ್ತು 2 ಪ್ರತಿವದಿಗಳು ಪಡೆದುಕೊಂಡು 3 ನೇ ಪ್ರತಿವಾದಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಹಾಗೇ ಬರೆದುಕೊಟ್ಟಿದ್ದರು ಸಹಿತ ಈಗ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದೇನೆ ಎಂದರೆ ಸರಿಯಲ್ಲ. ಸದರಿ ಖರೀದಿ ಕರಾರು ಪತ್ರಕ್ಕೆ ಸಂಬಂದಿಸಿದಂತೆ 3 ನೇ ಪ್ರತಿವಾದಿಯು 1 ಮತ್ತು 2 ನೇ ಪ್ರತಿವಾದಿಯರ ವಿರುದ್ದ ಕರಾರಿನ ಕರ್ತವ್ಯ ನಿರ್ವಹಣೆ ದಾವೆಯನ್ನು ಸಲ್ಲಿಸಿದ್ದನು ಎಂದರೆ ನನಗೆ ಗೊತ್ತಿಲ್ಲ. ಅದಕ್ಕೆ ಸಂಬಂದಿಸಿದಂತೆ 3 ನೇ ಪ್ರತಿವಾದಿ 1 ಮತ್ತು 2 ನೇ ಪ್ರತಿವಾದಿಗೆ ನೋಟಿಸ್ ಜಾರಿ ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಂತರ 1 ರಿಂದ 3 ನೇ ಪ್ರತಿವಾದಿಯರು ದಾವಾ ಆಸ್ತಿಗೆ ಸಂಬಂದಿಸಿದಂತೆ ಅಸಲು ದಾವಾ ನಂ.65/2013 ರಲ್ಲಿ ರಾಜಿ ಸಂದಾನ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಅಲ್ಲಿಂದ ಇಲ್ಲಿಯವರೆಗೂ 3 ನೇ ಪ್ರತಿವಾದಿಯೇ ದಾವಾ ಆಸ್ತಿಯ ಸ್ವಾಧೀನದಲ್ಲಿ ಇರುತ್ತಾನೆ ಎಂದರೆ ಸರಿಯಲ್ಲ. ಎಲ್ಲಾ ವಿಷಯ ಗೊತ್ತಿದ್ದರೂ ಸಹಿತ ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀಸವಾಲಿಗಾಗಿ 3 ನೇ ಪ್ರತಿವಾದಿಯ ಪರ ವಕೀಲರು ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**